ಇ) ೧೯೮೬—೮೭ನೇ ಸಾಲಿನ ಪ್ರತಿ ತಿಂಗಳಿಗೆ ಸದರಿ ಯೋಜನೆಗಳಲ್ಲಿ ಖರ್ಚಾದ ಹಣವೆಷ್ಟು ಹಾಗೂ ಖರ್ಚಾಗದೇ ಉಳಿದಿರುವ ಹಣವೆಷ್ಟು ;

ಈ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ಒದಗಿಸಿದ ಹಣದ ವಿವರ ಒದಗಿಸುವುದು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೬೨ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ೪೩೮.೩೪ ಲಕ್ಷ ರೂ.ಗಳು ಯೋಜನಾವಾರು ಪಟ್ಟಿ ಲಗತ್ತಿಸಿದೆ.

ಇ) ಏಪ್ರಿಲ್ ೧೯೮೬ ರಿಂದ ಮಾರ್ಚ್ ೧೯೮೭ರವರೆಗೆ ಕಾರ್ಯಕ್ರಮ ಮತ್ತು ಪ್ರಗತಿಯ ಪಟ್ಟಿಯನ್ನು ಲಗತ್ತಿಸಿದೆ.

ಈ) ೧೯೮೬—೮೭ನೇ ಸಾಲಿನಲ್ಲಿ ೫೫೫.೦೮ ಲಕ್ಷ ರೂ.ಗಳ ಯೋಜನಾ ವೆಚ್ಚದಲ್ಲಿ ೩೦.೪೩ ಲಕ್ಷ ರೂ.ಗಳು ಕೇಂದ್ರ ಪುರಸ್ಕೃತ ಕಾರ್ಯಕ್ರಮ ಮತ್ತು ಕೇಂದ್ರ ವಲಯ ಯೋಜನೆಗಳಿಗೆ ಬಿಡುಗಡೆಯಾಗಿರುತ್ತದೆ.

ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಬೆಳೆ ಪರಿಸ್ಥಿತಿ.

೫೦೩. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಬಿತ್ತನೆ ಮಾಡಬಹುದಾದ ಪ್ರದೇಶದ ವಿಸ್ತೀರ್ಣವೆಷ್ಟು, ಆ ಪೈಕಿ ಈ ವರ್ಷ ಬಿತ್ತನೆ ಮಾಡಿದ್ದ ಪ್ರದೇಶದ ವಿಸ್ತೀರ್ಣವೆಷ್ಟು, ಸದರಿ ಪ್ರದೇಶದಲ್ಲಿ ಯಾವ ಬೆಳೆ ಯಾವ ವರ್ಷಕ್ಕೆ ಬಂದಿದೆ.

ಆ) ಮಳೆ ಇಲ್ಲದೆ ಬೆಳೆನಾಶವಾಗದು, ಈಬೆಳೆ ಪರಿಹಾರಕ್ಕಾಗಿ ಸರ್ಕಾರವು ಮೂಡಿಸಿರುವ ಕಾರ್ಯಕ್ರಮಗಳೇನು.

ಇ) ಹಾಗಿದ್ದಲ್ಲಿ, ಈ ಬಗ್ಗೆ ಎತ್ತುಗಳು ಮತ್ತು ಹಣವನ್ನು ಪಡೆದ ಗಿರಿಜನರ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೆಚ್. ಡಿ. ಕೋಟೆ ತಾಲೂಕಿನಲ್ಲಿ ಬಿತ್ತನೆ ಮಾಡಬಹುದಾದ ಪ್ರದೇಶದ ವಿಸ್ತೀರ್ಣ ೬೨,೨೪೩ ಹೆಕ್ಟೇರ್ಸ್. ಈ ವರ್ಷ ಬಿತ್ತನೆ ಮಾಡಿದ್ದ ಪ್ರದೇಶದ ವಿಸ್ತೀರ್ಣ ೪೬,೯೧೦ ಹೆಕ್ಟೇರ್ಸ್. ಬಿತ್ತನೆ ಮಾಡಿದ ಬೆಳೆಗಳು ಮತ್ತು ಅವುಗಳ ವರ್ಷ ಈ ಕೆಳಕಂಡಂತಿದೆ.

೧. ರಾಗಿ—ಕೊಯಿಲು ಮುಗಿದಿದ್ದು ಅತಿ ಸ್ವಲ್ಪ ಬೆಳೆಯಾಗಿರುತ್ತದೆ.

೨. ನಿಧಾನವಾಗಿ ನಾಟಿ ಮಾಡಲಾದ ರಾಗಿ, ಒಣಗಿ ಹೋಗುತ್ತಿದೆ

೩. ಹತ್ತಿ, ಕಾಂಡ ಒಡೆಯುತ್ತಿದ್ದು ವರ್ಷದಲ್ಲಿ ಒಣಗಿಹೋಗುತ್ತಿದೆ.

೪. ಮಿಶ್ರತಳಿ ಜೋಳ, ಒಣಗಿ ಹೋಗುತ್ತಿದೆ.

೫. ಭತ್ತ. ನುಗು ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿಯಾಗಿರುವುದಿಲ್ಲ [illegible] ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿಯಾಗಿದೆ.

೬. ದ್ವಿದಳ ದಾನ್ಯಗಳು, ಒಣಗಿ ಹೋಗುತ್ತಿದೆ.

೭. ಗೋದಿ, ಪರಿಪಕ್ವವಾಗಿಲ್ಲದ ಬೆಳೆಯಾಗಿದೆ.

ಆ) ಪ್ರಸ್ತುತ ವರ್ಷ ಸರ್ಕಾರವು ಬೆಳೆ ಕಳೆದುಕೊಂಡ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪರ್ಯಾಯ ವ್ಯವಸ್ಥೆಯಾಗಿ ಕೃಷಿ ಸಾಮಗ್ರಿ ಭರಿತ ಚೀಲಗಳನ್ನು ವಿತರಿಸಲು ತೀರ್ಮಾನಿಸಿದೆ ಹಾಗೂ ಅದಕ್ಕಾಗಿ ಈಗಾಗಲೇ ಹಣ ಬಿಡುಗಡೆ ಮಾಡಿದೆ.

೫) ಪ್ರಸಕ್ತ ವರ್ಷ ಬಾಧಿತ ಜನರಿಗೆ (ಅಭಾವಕ್ಕೊಳಗಾದ ಜನಗಳಿಗೆ) ಎತ್ತುಗಳನ್ನಾಗಲೀ ಹಣವನ್ನಾಗಲೀ ನೀಡಿರುವುದಿಲ್ಲ.

ಕೇಂದ್ರ ಸರ್ಕಾರದಿಂದ ಕ್ಷಾಮ ಪರಿಹಾರ ಧನ

೭೬೪. ಶ್ರೀ ಎಸ್.ಎಸ್. ಕಡಪಟ್ಟಿ (ಹುನಗುಂದ).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯವು ಕಳೆದ ೪-೫ ವರ್ಷಗಳಿಂದಲೂ ಕ್ಷಾಮಕ್ಕೆ ತುತ್ತಾಗಿ ತತ್ತರಿಸಿದರೂ, ಕೇಂದ್ರ ಸರ್ಕಾರವು ಕ್ಷಾಮಕ್ಕೀಡಾದ ರಾಜ್ಯಗಳಿಗೆ ಮುಂಗಡ ಸಹಾಯ ಧನವನ್ನು ನೀಡುವುದಕ್ಕಾಗಿ ಎಂಟನೇ ವಿತ್ತೀಯ ಆಯೋಗ ಸಲಹಾನ್ವಯ ಕೋರಬೇಕೆಂದು ರಾಜ್ಯಗಳಿಗೆ ಸೂಚಿಸಿದ್ದು, ಆ ಪ್ರಕಾರವಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ ?

ಆ) ಸದರೀ ಆಯೋಗದಡಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಯೋಜನಾ ಆಯೋಗ ಮತ್ತು ಮುಖ್ಯ ಮಂತ್ರಿಗಳ ಸಭೆಯಲ್ಲಿ ಚರ್ಚಿಸಿದ್ದು ಹಾಗೂ ಈ ಬಗ್ಗೆ ಕೇಂದ್ರ ಸರ್ಕಾರದವರು ತಾಳಿದ ನಿಲುವೇನು ? ವಿವರ ನೀಡುವುದು.

ಇ) ರಾಜ್ಯದ ಸಂಪನ್ಮೂಲಗಳು ಮಿತವಾಗಿರುವುದರಿಂದ ಇತರೇ ಯೋಜನೆಯ ಬಾಬ್ತಿನಲ್ಲಿ ಬರ ಪರಿಹಾರಕ್ಕೆ ಹಣವೊದಗಿಸುವುದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಮೊದಲು ಕ್ಷಾಮ ಪರಿಹಾರಕ್ಕಾಗಿ ಖರ್ಚು ಮಾಡಿದ ಹಣವನ್ನು ನೆರೆ ಹಾವಳಿಗೆ ನೀಡುವ ಸಹಾಯ ಧನವಾಗಿ ಪರಿವರ್ತಿಸಲು ಕೋರಿ ಕೇಂದ್ರ ಸರ್ಕಾರದಿಂದ ರಾಜ್ಯದ ನೀರಾವರಿ ಹಾಗೂ ವಿದ್ಯುತ್ ಯೋಜನೆಗಳು ಹಾಗೂ ಇತರೆ ಕಾಮಗಾರಿಗಳಿಗಾಗಿ ಕೇಂದ್ರದಿಂದ ಹಣ ಪಡೆಯುವುದಕ್ಕಾಗಿ ಸರ್ಕಾರದಪರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು) —

ಅ) ಹೌದು.

ಆ) ಈಗ ಚಾಲ್ತಿಯಲ್ಲಿರುವ ಎಂಟನೇ ಆರ್ಥಿಕ ಆಯೋಗದ ಶಿಫಾರಸ್ಸಿನ ಮೇರೆಗೆ ಬರ ಪರಿಹಾರ ಸಂಬಂಧಾರ್ಹವಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಒದಗಿಸಿ ಕೊಡುವ ಧನ ಸಹಾಯವನ್ನು ಯೋಜನಾ ಮುಂಗಡ ಹಣವೆಂದು ಪರಿಗಣಿಸಲಾಗುವುದು. ಇದನ್ನು ಸಾಮಾನ್ಯವಾಗಿ ರಾಜ್ಯದ ವಾರ್ಷಿಕ ಯೋಜನೆ ಹಣದ ಪ್ರತಿ ಶತ ೫ ರಷ್ಟಕ್ಕೆ ಏರದಂತೆ ಕೇಂದ್ರ ಸರ್ಕಾರದವರು ಮಂಜೂರು ಮಾಡುತ್ತಾರೆ. ಹೀಗೆ ಮಂಜೂರು ಮಾಡಲಾಗುವ ಯೋಜನಾ ಮುಂಗಡದ ಹಣವನ್ನು, ಮಂಜೂರು ಮಾಡಿದ ವರ್ಷವನ್ನು ಬಿಟ್ಟು ತದನಂತರ ೫ ವರ್ಷಗಳಲ್ಲಿ ಸಮನಾದ ಕಂತುಗಳಲ್ಲಿ ರಾಜ್ಯಕ್ಕೆ ಬರುವ ಯೋಜನಾ ಹಣದಿಂದ ಮುರಿದುಕೊಳ್ಳಲಾಗುವುದು.

ಈ ಬಗ್ಗೆ ಹಲವಾರು ಮಾರ್ಪಾಡುಗಳನ್ನು ಒಯ್ದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಹಲವಾರು ಸಂದರ್ಭಗಳಲ್ಲಿ ಈಗ ಇರುವ ಕೇಂದ್ರ ಧನ ಸಹಾಯದ ರೂಪವನ್ನು ಬದಲಾಯಿಸಬೇಕೆಂದು ಒತ್ತಾಯ ಪೂರ್ವಕವಾಗಿ ಮನವಿಯನ್ನು ಅಗಿಂದಾಗ್ಗೆ ಮಾಡಿಕೊಡುತ್ತಿದೆ. ಮೊದಲನೇ ಬಾರಿ ೧೯೮೬ರ ಜನವರಿಯಲ್ಲಿ ಕೇಂದ್ರ ಸರ್ಕಾರವು ಕರೆದಿದ್ದ ರಾಜ್ಯಗಳ ಕಂದಾಯ ಮಂತ್ರಿಗಳ ಸಭೆಯಲ್ಲಿ ರಾಜ್ಯದ ಕಂದಾಯ ಹಾಗೂ ಯೋಜನಾ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿ ಯವರು ಈ ಕೆಳಕಂಡ ಮಾರ್ಪಾಡುಗಳನ್ನು ಕೂಡಲೇ ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿತು.

೧) ಸ್ಥಳೀಯ ಅಗತ್ಯತೆಗಳನ್ನು ಪೂರೈಸಲು ಅಂತರ ವಲಯ ಹೊಂದಾಣಿಕೆಗಳ ಜಾರಿಗಾಗಿ ಗರಿಷ್ಠ ಮಿತಿಗಳಲ್ಲಿ ಸಡಿಲತೆಗೆ ಅವಕಾಶ ಒದಗಿಸುವುದು.

೨) ಕೇಂದ್ರ ನೆರವನ್ನು ರಾಜ್ಯದ ಯೋಜನೆ ಜೊತೆಗೆ ಸಂಪರ್ಕ ಕಲ್ಪಿಸಬಾರದು ಮತ್ತು ಅದನ್ನು ಸತತ ವರ್ಷಗಳಿಂದ ಬರಕ್ಕೆ ತುತ್ತಾದ ಕಾರಣ ಭೀಕರ ಅಭಾವಕ್ಕೊಳಗಾಗಿದೆ ಎಂಬ ಅಂಶವನ್ನು ಪರಿಶೀಲಿಸಿ ಸಂಪೂರ್ಣ ಸಹಾಯ (ಗ್ರಾಂಟ್) ಎಂಬುದಾಗಿ ನೀಡಬೇಕು.